# ಗಿಫ್ಟ್ ಗುಂಗಲ್ಲಿ ಸೋನು

■ ಪದ್ಮನಾಭ ಭಟ್

ಸೋನು ಗೌಡ ಖುಷಿಯಾಗಿದ್ದಾರೆ. 'ಕೋವಿಡ್ ನಂತರದಲ್ಲಿ ನನಗೆ ಇಷ್ಟೊಂದು ಅವಕಾಶಗಳು ಬರಬಹುದು ಎಂದು ನಾನು ನಿಜಕ್ಕೂ ಅಂದುಕೊಂಡಿರಲಿಲ್ಲ. ನಾನು ನಿರೀಕ್ಷಿಸಿರದ ಪಾತ್ರಗಳಲ್ಲೆಲ್ಲ ನಟಿಸುವ ಅವಕಾಶ ಬರುತ್ತಿವೆ. ಮತ್ತವು ತುಂಬ ಒಳ್ಳೆಯ ಕಂಟೆಂಟ್ ಇರುವ ಸಿನಿಮಾಗಳು ಕೂಡ' ಎಂದು ಖುಷಿಯಿಂದಲೇ ಹೇಳಿಕೊಳ್ಳುತ್ತಾರೆ ಅವರು.

ಸದ್ಯಕ್ಕೆ ಸೋನು 'ವೆಡ್ಡಿಂಗ್ ಗಿಫ್ಟ್' ಗುಂಗಿನಲ್ಲಿದ್ದಾರೆ. ಬಾಲಚಂದ್ರ ಪ್ರಭು ನಿರ್ದೇಶನದ ಈ ಸಿನಿಮಾದಲ್ಲಿ ಸೋನು, ಸ್ತ್ರೀವಾದಿ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. 'ಸ್ವತಂತ್ರವಾಗಿ ಬದುಕಬೇಕು, ಬದುಕಿನಲ್ಲಿ ಏನಾದರೂ ಸಾಧಿಸಬೇಕು ಎಂಬ ಛಲ ಇರುವ ಹುಡುಗಿಯ ಪಾತ್ರ ಇದು. ಈ ಛಲಕ್ಕಾಗಿ ಅವರು ವೈಯಕ್ತಿಕ ಬದುಕಿನ ಸಂತೋಷಗಳನ್ನೂ ಬಲಿಕೊಡಲು ಸಿದ್ಧಳಿರುತ್ತಾಳೆ. ಅಂಥ ಹುಡುಗಿಗೆ ಪ್ರೀತಿ ಆದರೆ ಏನಾಗುತ್ತದೆ ಎಂಬುದೇ ಈ ಸಿನಿಮಾದ ಕಥೆ' ಎನ್ನುತ್ತಾರೆ ಸೋನು.

ಹೊಸಬರ ತಂಡವೇ ರೂಪಿಸಿರುವ ಈ ಚಿತ್ರದಲ್ಲಿ ನಿಶಾನ್ ಎನ್ನುವ ಹೊಸ ಹುಡುಗ ನಾಯಕನಾಗಿ ನಟಿಸಿದ್ದಾರೆ. ಅವರಿಗಿದು ಮೊದಲ ಕನ್ನಡ ಸಿನಿಮಾ. ಈಗಾಗಲೇ ಮಲಯಾಳಂ, ಬೆಂಗಾಲಿ, ಮರಾಠಿ ಸಿನಿಮಾಗಳಲ್ಲಿ ನಟಿಸಿರುವ ಅವರು ಕೂರ್ಗ್ ಮೂಲದವರು.

'ಬಹುತೇಕ ತಂಡ ಹೊಸಬರದ್ದು. ಆದ್ದರಿಂದ ಹೊಸದೇನೋ ಮಾಡುತ್ತಿದ್ದೇವೆ ಎಂಬ ಉತ್ಸಾಹವಿತ್ತು. ತಾರಾಗಣದಲ್ಲಿ ಅಚ್ಯುತ್ ಕುಮಾರ್, ಪ್ರೇಮಾ, ಪವಿತ್ರಾ ಲೋಕೇಶ್ ಜೊತೆ ಕೆಲಸ ಮಾಡಿದ್ದು ಬೇರೆಯದೇ ಅನುಭವ. ನಾನು ಅಚ್ಯುತ್ ಕುಮಾರ್ ಅವರ ಜೊತೆಗೆ ಈಗಾಗಲೇ ನಟಿಸಿದ್ದೇನೆ. ಆದರೆ ಪ್ರೇಮಾ ಮತ್ತು ಪವಿತ್ರಾ ಲೋಕೇಶ್ ಅವರ ಜೊತೆಗೆ ನಟಿಸುತ್ತಿರುವುದು ಇದೇ ಮೊದಲು. ಅವರ ಜೊತೆಗಿನ ಕೆಲವು ದೃಶ್ಯಗಳು ತುಂಬ ಚೆನ್ನಾಗಿವೆ' ಎಂದು





# ರಾಕಿ ಅಮ್ಮನ ಬಾಕಿ ಕನಸುಗಳು

ಇತ್ತೀಚೆಗೆ 'ಕೆಜಿಎಫ್ 2' ಭಾಗದ ಪತ್ರಿಕಾಗೋಷ್ಠಿಯಲ್ಲಿ ನಟ ಯಶ್ ವೇದಿಕೆಯ ಮೇಲೆ ಮಾತಾಡುವಾಗ, 'ನಮ್ಮಮ್ಮನ ಕಣ್ಣುಗಳು ತುಂಬ ಆಕರ್ಷಕವಾಗಿವೆ' ಎಂದು ಹೇಳಿದ್ದರು. ಅವರು ಹೇಳಿದ್ದು ಅವರ ನಿಜಬದುಕಿನ ಅಮ್ಮನ ಬಗ್ಗೆಯಲ್ಲ, ಬದಲಿಗೆ 'ಕೆಜಿಎಫ್ 1'ನಲ್ಲಿ ಯಶ್ ಅಮ್ಮನಾಗಿ ನಟಿಸಿದ್ದ ಅರ್ಚನಾ ಜೋಯಿಶ್ ಅವರ ಬಗ್ಗೆ. ಅದನ್ನು ಕೇಳಿದ ಅರ್ಚನಾ ಕೂತಲ್ಲೇ ನಾಚಿ ನಕ್ಕಿದ್ದರು.

ಬಹುಶಃ ಈಗ ಕೆಲವೇ ವರ್ಷಗಳ ಹಿಂದೆ ಅರ್ಚನಾ, ತಾನು ಹೀಗೊಂದು ಪ್ಯಾನ್ ಇಂಡಿಯಾ ಸಿನಿಮಾದಲ್ಲಿ ನಟಿಸುತ್ತೇನೆ, ತನ್ನ ನಟನೆಗೆ ಇಷ್ಟೊಂದು ಪ್ರಶಂಸೆ ಸಿಗುತ್ತದೆ ಎಂದು ಕನಸಿನಲ್ಲಿಯೂ ಅಂದುಕೊಂಡಿರಲಿಕ್ಕಿಲ್ಲ. ಹಾಗೆಂದು ನಟನೆ ಅವರಿಗೆ ಹೊಸದೇನೂ ಅಲ್ಲ. ಭರತನಾಟ್ಯ